**ಸಾಕ್ಷಿಯನ್ನು ದಿಃ 05.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಕರೀಗೌಡ ನನಗೆ ಚಿಕ್ಕಪ್ಪನ ಮಗನಾಗಬೇಕು. ಈ ದಾವೆಯ ಬಗ್ಗೆ ಎಲ್ಲಾ ವಿಷಯವನ್ನು ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ನಾನು 2 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ಸರಿ. ಈ ದಾವೆಗೆ ನಾನು ತಕರಾರು ಸಲ್ಲಿಸಿರುವುದಿಲ್ಲ. ತಕಾರಾರು ಸಲ್ಲಿಸಲು ತೊಂದರೆ ಇರಲಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಕರೀಗೌಡ ಇವರು ಹೇಳಿ ಬರೆಯಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮರಿದೇವಮ್ಮರವರಿಗೆ ಆಸ್ತಿ ಭಾಗಂಶದಲ್ಲಿ ಬಂದಿತ್ತು ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದು ಆ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿಯು ದಾಖಲೆ ಆಗಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಮುಂದುವರೆದು ಭಾಗ ಆಗಿತ್ತು ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 25/1 ಕ್ಕೆ ಸಂಬಂಧಪಟ್ಟಂತೆ ಮರಿದೇವಮ್ಮ ಹೆಸರಿನಲ್ಲಿ ಯಾವತ್ತು ಖಾತೆ ಆಗಿರಲಿಲ್ಲ ಎಂದರೆ ಸರಿ. ಮರಿದೇವಮ್ಮ ರವರ ಹೆಸರಿಗೆ ಖಾತೆ ಇಲ್ಲದೇ ಇರುವ ಕಾರಣ ಸರ್ವೇ ನಂ. 25/1 ಅನ್ನು ಮಾರಾಟ ಮಾಡಲು ಹಕ್ಕಿರಲಿಲ್ಲ ಎಂದರೆ ಸಾಕ್ಷಿಯು ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಕರೀಗೌಡರವರಿಗೆ ಸಹಾಯ ಮಾಡಲು ಮರಿದೇವಮ್ಮ ರವರು ಕರೀಗೌಡರವರಿಗೆ ಸರ್ವೇ ನಂ. 25/1 ರಲ್ಲಿ 28 ಗುಂಟೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಂದೆಯ ಹೆಸರು ತಿಮ್ಮಯ್ಯ. ನಾವು ಯಾಂದಹಳ್ಳಿಯಲ್ಲಿ ಹುಟ್ಟಿ ಬೆಳೆದಿರುತ್ತೇವೆ. ನನ್ನ ತಂದೆಗೆ ಎಷ್ಟು ಆಸ್ತಿ ಇತ್ತು ಎಂದು ಗೊತ್ತಿಲ್ಲ. ಮುಂದುವರೆದು ಅವರು ಕೊಟ್ಟಿರುವ ಆಸ್ತಿಯನ್ನು ನಾವು ನಾಲ್ಕು ಜನ ಭಾಗ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆಯ ಹೆಸರಿಗೆ ಖಾತೆ ಇತ್ತೊ ಇಲ್ಲವೋ ಎಂದು ಗೊತ್ತಿಲ್ಲ. ನಾವು ನಾಲ್ಕು ಜನ ಅಕ್ಕ ತಂಗಿಯರು. ಸದರಿಯವರು ದೇವಮ್ಮ, ಮರಿದೇವಮ್ಮ, ದೊಡ್ಡತಾಯಮ್ಮ ಹಾಗೂ ನಾನು. ಯಾವ ಸರ್ವೇ ನಂಬರ್ ನಲ್ಲಿ ಎಷ್ಟೇಷ್ಟು ಆಸ್ತಿ ಬಂದಿದೆ ಎಂದರೆ ಸಾಕ್ಷಿಯು ಸರ್ವೇ ನಂಬರ್ ಗೊತ್ತಿಲ್ಲ ತಲಾ 28 ಗುಂಟೆ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಜಮೀನು ಯಾಂದಹಳ್ಳಿಯಲ್ಲಿತ್ತು. ಕರೀಗೌಡ ಇವರು ನನಗೆ ಚಿಕ್ಕಪ್ಪನ ಮಗನಾಗಬೇಕು. ಕರೀಗೌಡ ಇವರ ತಂದೆಯ ಹೆಸರು

ಗೌಡಯ್ಯ. ನನ್ನ ತಂದೆ ಜೊತೆ ಹುಟ್ಟಿದವರು ಕರೀಗೌಡ ಮತ್ತು ಗೌಡಯ್ಯ. ಕರೀಗೌಡ, ಗೌಡಯ್ಯ ಹಾಗೂ ತಿಮ್ಮಯ್ಯ ಇವರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು. ನನ್ನ ತಾತನ ಹೆಸರು ತಿಮ್ಮಯ್ಯ. ನಾವು ಭಾಗ ಮಾಡಿಕೊಂಡಿದ್ದೇವು ಎನ್ನಲಾದ ಆಸ್ತಿಯು ನನ್ನ ತಾತನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಕರೀಗೌಡ, ಗೌಡಯ್ಯ ಹಾಗೂ ತಿಮ್ಮಯ್ಯ ಇವರು ವಿಭಾಗ ಪತ್ರ ಮಾಡಿಕೊಂಡಿರಲಿಲ್ಲ. ನಾನು ಮಾರಾಟ ಮಾಡುವ ಸಮಯದಲ್ಲಿ ಜಮೀನಿನ ಖಾತೆ ನನ್ನ ಹೆಸರಿಗೆ ಆಗಿರಲಿಲ್ಲ. ನನ್ನ ಅಕ್ಕತಂಗಿಯರಿಗೂ ಸಹ ಖಾತೆ ಆಗಿರಲಿಲ್ಲ. ಸದರಿ ಜಮೀನು ಮೂಡಾದಿಂದ ಸ್ವಾಧೀನಪಡಿಸಿಕೊಳ್ಳುವ ಮೊದಲೇ ನಾವು ಮಾರಾಟ ಮಾಡಿದ್ದೇವು ಎಂದು ಉತ್ತರಿಸಿರುತ್ತಾರೆ. 1998 ರಲ್ಲಿ ಮೂಡಾದಿಂದ ನಮಗೆ ನೋಟೀಸ್ ನೀಡಿದ್ದರು ಎಂದರೆ ಆ ಬಗ್ಗೆ ಗೊತ್ತಿಲ್ಲ. ನಮಗೆ 28 ಗುಂಟೆ ಜಮೀನು ಬಂದಿದೆ ಎಂದು ತೋರಿಸಲು ನಿಖರವಾದ ದಾಖಲೆ ಇಲ್ಲ ಎಂದರೆ ಸರಿ. ಕ್ರಯಪತ್ರಕ್ಕೆ ದೇವಮ್ಮ, ನಾನು ಹಾಗೂ ಮರಿದೇವಮ್ಮ ಸಹಿ ಹಾಕಿರುತ್ತೇವೆ. ನಮಗೆ ಮಾರಾಟ ಮಾಡಲು ಯಾವುದೇ ಹಕ್ಕು ಇಲ್ಲದೇ ಇದ್ದರೂ ಕ್ರಯಪತ್ರವನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ನಾಲ್ಕು ಜನ ಅಕ್ಕತಂಗಿಯರಿಗೂ ಯಾವುದೇ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಮತ್ತು ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಆಸ್ತಿ ಚಿಕ್ಕಹೆಣ್ಣಮ್ಮ ರವರಿಗೆ ಸೇರಿದ್ದು. ನನ್ನ ತಂದೆ ತೀರಿ ಹೋದ ನಂತರ ನನ್ನ ತಾಯಿಯ ಭಾಗಕ್ಕೆ ಬಂದಿರುತ್ತದೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.